858 ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಬರುವ 3 ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ತಿಂಗಳು ಉಂಟಾದ ಅತಿವೃಷ್ಟಿಯಿಂದ ಬಿದ್ದ ಮನೆಗಳೆಷ್ಟು? ವಿದ್ಯುತ್ ಕಂಬಗಳೆಷ್ಟು? ಇದರಿಂದಾಗಿ ಒಟ್ಟು ಎಷ್ಟು ಹಾನಿಯಾಗಿದೆ (ಕ್ಷೇತ್ರವಾರು ವಿವರ ನೀಡುವುದು);

ಆ) ಅತಿವೃಷ್ಟಿಯಿಂದ ಹಾನಿ ಆದವರಿಗೆ ತುರ್ತಾಗಿ ಪರಿಹಾರ ಧನ ನೀಡಲು ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು? ಬಿಡುಗಡೆ ಮಾಡಿದ ಹಣದಲ್ಲಿ ಅರ್ಹರಿಗೆ ನೀಡಿದ ಹಣವೆಷ್ಟು?

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಒಟ್ಟು 4 ವಿಧಾನಸಭಾ ಕ್ಷೇತ್ರಗಳು ಬರುತ್ತಿದ್ದು, ಅವುಗಳ ವಿವರ ಈ ಕೆಳಗಿನಂತಿರುತ್ತದೆ.

(ಲಕ್ಷ ರೂ.ಗಳಲ್ಲಿ)

ಮನೆ ಹಾನಿ				ವಿದ್ಯುತ್ ಕಂಬ ಹಾನಿ	
ವಿಧಾನಸಭೆ ಕ್ಷೇತ್ರದ ಹೆಸರು	ಬಿದ್ದ ಮನೆಗಳ ಸಂಖ್ಯೆ	ಅಂದಾಜು ಹಾನಿ	ನೀಡಿದ ಪರಿಹಾರ	ಸಂಖ್ಯೆ	ಅಂದಾಜು ಹಾನಿ
71 ಧಾರವಾಡ	220	28.60	16.41	–	–
72 ಹು–ಧಾ ಪೂರ್ವ	108	23.35	6.44	87	2.076
73 ಹು–ಧಾ ಕೇಂದ್ರ	342	67.69	20.30	0	0
74 ಹು–ಧಾ ಪಶ್ಚಿಮ	352	53.32	20.65	77	2.145

ಆ) ತುರ್ತು ಪರಿಹಾರ ಕಾರ್ಯಗಳಿಗೆ ರಾಜ್ಯ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಧಾರವಾಡ ಜಿಲ್ಲೆಗೆ ಒಟ್ಟು ರೂ.8000.00 ಲಕ್ಷ ಬಿಡುಗಡೆ ಮಾಡಿದೆ. ಧಾರವಾಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಹಾನಿಯಾದ ಅರ್ಹರಿಗೆ ಕೆಳಕಂಡಂತೆ ಪರಿಹಾರ ನೀಡಲಾಗಿದೆ.

ಅ. ನಂ.	ಶೀರ್ಷಿಕೆ	ಧಾರವಾಡ	ಹುಬ್ಬಳ್ಳಿ	ಕಲಘಟಗಿ	ಕುಂದಗೋಳ	ನವಲಗುಂದ
1	ಮನೆಹಾನಿ	280.36	222.32	69.11	198.70	330.91
2	ಪಾತ್ರೆ ಬಟ್ಟೆ ಇತ್ಯಾದಿ	97.82	3.60	34.22	0.10	222.62
3	ಬೆಳೆ ಹಾನಿ	504.97	533.32	353.82	586.51	1122.26
4	ಮಾನವ ಜೀವಹಾನಿ	3.00	1.00	2.00	0.00	1.00
5	ಜಾನುವಾರು ಜೀವಹಾನಿ	0.10	0.41	0.37	0.08	1.89

665 ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಜವಳಿ, ಯುವಜನ ಸೇವೆಗಳು ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹತ್ತಿ ಗಿರಣಿಗಳ ಸಂಖ್ಯೆ ಎಷ್ಟು ; ಇವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಇವುಗಳಲ್ಲಿರುವ ನೌಕರರ ಸಂಖ್ಯೆ ಎಷ್ಟು;

ಆ) ಕರ್ನಾಟಕದಲ್ಲಿ ಹತ್ತಿ ಗಿರಣಿಗಳು ಪ್ರತಿ ಯುನಿಟ್ ವಿದ್ಯುತ್‌ಗೆ 4.50 ರೂ. ಪಾವತಿಸಬೇಕಾಗಿರುವುದರಿಂದ ಇವುಗಳು ಮುಚ್ಚುವ ಹಂತ ತಲುಪಿರುವುದು ನಿಜವಲ್ಲವೇ ;

ಇ) ಮಹಾರಾಷ್ಟ್ರದಲ್ಲಿ ಪ್ರತಿ ಯುನಿಟ್‌ಗೆ 2.50 ರೂ. ಇದ್ದು, ರಾಜ್ಯದಲ್ಲೂ ವಿದ್ಯುತ್ ದರ ಕಡಿತಗೊಳಿಸಲು ಸರ್ಕಾರ ಆದೇಶಿಸುತ್ತದೆಯೇ;

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಜವಳಿ, ಯುವಜನ ಸೇವೆಗಳು ಮತ್ತು ಕ್ರೀಡಾ ಸಚಿವರು) :

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹತ್ತಿ ಗಿರಣಿಗಳ ಸಂಖ್ಯೆ – 39

ಇವುಗಳು ಕಾರ್ಯನಿರ್ವಹಿಸುತ್ತಿರುವ ಜಿಲ್ಲಾವಾರು ವಿವರ ಇಂತಿದೆ.